## ಧೋರಣೆ ಬದಲಾಗಲಿ

'ಕಾನೂನಿನ ಕಣ್ಣಿಗೆ ಯಾರ ಕೈ ಅಡ್ಡಿ?' (ಸೆ. 12, ಮಂಜುಶ್ರೀ ಎಂ. ಕಡಕೋಳ) ಮುಖಪುಟ ಲೇಖನ ಅತ್ಯಾಚಾರಕ್ಕೆ ಒಳಗಾದವರ ಅಸಹಾಯಕತೆ ಮತ್ತು ಸಂತ್ರಸ್ತೆಯ ಬಗ್ಗೆ ನಮ್ಮ ಸಮಾಜಕ್ಕಿರುವ ನಿಕೃಷ್ಟತೆ ಬಗ್ಗೆ ವಿಶದವಾಗಿ ವಿವರಿಸಿದೆ. ಸಾಕಷ್ಟು ಕಾನೂನುಗಳಿದ್ದರೂ ಅವುಗಳನ್ನು ಪ್ರಚುರಪಡಿಸಿ ಪಾಲಿಸಲು ಸುಲಭ ದಾರಿಗಳಿಲ್ಲದಿರುವುದು, ಸಂತ್ರಸ್ತೆಯ ಮೇಲೇ ಅಪಚಾರದ ಜವಾಬ್ದಾರಿ ಹೊರಿಸಿರುವುದು ಸಹ ಮುಖ್ಯ ಕಾರಣ ಎನ್ನಬಹುದು. ಮುಖ್ಯವಾಗಿ ಸಂತ್ರಸ್ತೆಯ ಬಗೆಗಿನ ಧೋರಣೆಯನ್ನು ಸಮಾಜ ಬದಲಿಸಿಕೊಳ್ಳಬೇಕು.

—ಶ್ರೀನಿವಾಸನ್ ಎಸ್ಕೆ, ಬೆಂಗಳೂರು




## ಕಾಣದ ಕೈಗಳ ಪ್ರಭಾವ

ದೇಶದಲ್ಲಿ ಲೈಂಗಿಕ ದೌರ್ಜನ್ಯಗಳು ಮತ್ತು ಸಾಮೂಹಿಕ ಅತ್ಯಾಚಾರಗಳು ಬಹುಪಾಲು ತಳಸಮುದಾಯದ ಹೆಣ್ಣುಮಕ್ಕಳ ಮೇಲೆಯೇ ನಡೆಯುತ್ತಿವೆ. ಎಷ್ಟೋ ಅತ್ಯಾಚಾರ ಪ್ರಕರಣಗಳು ಪೊಲೀಸ್ ಠಾಣೆಯಲ್ಲಿ ದಾಖಲಾಗುವುದೇ ಇಲ್ಲ. ಇದಕ್ಕೆ ಜಾತಿ ವ್ಯವಸ್ಥೆ ಕೂಡ ಒಂದು ಕಾರಣವೇ. ರಾಜಕೀಯ ಪ್ರಭಾವ ಇಲ್ಲದಿರುವುದು, ಬಡತನ ಮತ್ತು ಪೊಲೀಸರೇ ರಾಜಿ ಸಂಧಾನಕ್ಕೆ ಸಲಹೆ ನೀಡುವುದು, ಹೀಗೆ ಕಾಣದ ಕೈಗಳು ಕೆಲಸ ಮಾಡುತ್ತವೆ. ರೇಪಿಸ್ಟ್‌ಗಳಿಗೆ ಕಠಿಣ ಶಿಕ್ಷೆ, ಸಾರ್ವಜನಿಕವಾಗಿ ಬಹಿಷ್ಕಾರ ಹಾಕಿದಾಗ ಮಾತ್ರ ಅತ್ಯಾಚಾರ ಪ್ರಕರಣ ತಡೆಯಲು ಸಾಧ್ಯವಾಗಬಹುದು ಎನ್ನುವುದು ನನ್ನ ಅಭಿಮತ.

—ಬೂಕನಕೆರೆ ವಿಜೇಂದ್ರ, ಮೈಸೂರು

## ಆಚಾರ

'STOP RAPE': ಸರಿ. ಮಾಮೂಲು ಅತ್ಯಾಚಾರ, ಆಗಬೇಕು, ಗತಕಾಲೀನ ಸಮಾಚಾರ! ಆದರೆ ಈಗ ವ್ಯಾಪಕವಾಗಬೇಕಾದುದೂ 'ಅತ್ಯಾಚಾರ'ವೇ: ಅರ್ಥಾತ್, ಅತಿ– ಆಚಾರ (ಸದಾಚಾರ) 'ಆಚಾರಕರ ಸಾಗು!' ಎನ್ನುತ್ತದೆ, ಜನಪದ ಗೀತೆ.

—ಸಿಪಿಕೆ, ಮೈಸೂರು

## ಆಪ್ತ ಬರಹ

'ಒನಕೆಯ ನೆನಕೆಯಲ್ಲಿ' (ಸೆ. 12, ವಿನು ಗಂಗೆ) 'ಮರಗಳ ಕಥೆ' ಓದುತ್ತಾ ಯಾಕೆ ಅವರ ಬರಹಗಳು ಹೆಚ್ಚು ಆಕರ್ಷಿಸುತ್ತವೆ ಎಂದು ಮಂಥನ ಮಾಡಿಕೊಂಡಾಗ ಸ್ಮೃತಿಪಟಲದಲ್ಲಿ ನಿಲುಕಿದ್ದು ಸುಂದರ ಪ್ರಕೃತಿ. ನಿಸರ್ಗವನ್ನು ಪ್ರೀತಿಸುವ ಅವರ ವಿಚಾರಗಳೂ ಅಷ್ಟೇ ಸಹಜವಾಗಿ ಮೂಡಿಬರುತ್ತವೆ ಎನಿಸಿತು. ಅಳಿವಿನಂಚಿನಲ್ಲಿರುವ ಮರಗಳು, ಅವುಗಳ ಪ್ರಭೇದ, ವೈಜ್ಞಾನಿಕ ಹೆಸರು, ಉಪಯೋಗವನ್ನು ಸವಿವರದೊಂದಿಗೆ ಕಟ್ಟಿಕೊಡುವ ಅವರ ಬರಹ ಬಹಳ ಆಪ್ತವಾಗಿರುತ್ತವೆ.

—ಮೊಹಮದ್ ಬೆದ್ರ

## ಕ್ಷಕಿರಣ

'ಜೋರ್‌ಬೀರ್; ರಣಹದ್ದುಗಳ ಅಭಯಾರಣ್ಯ' (ಸೆ. 12, ಜಿ.ಆರ್. ಪಂಡಿತ್) ಛಾಯಾಚಿತ್ರ ಬರಹ, ಕಾಣೆಯಾಗುತ್ತಿರುವ ರಣಹದ್ದುಗಳ ಮೇಲೆ ಬೀರಿದ ಕ್ಷಕಿರಣದಂತಿದೆ.

—ಭಟ್ಟ ವೆಂಕಟಾಚಲ

## ಕಣ್ಮರೆಯಾದ ಹದ್ದುಗಳು

ಹಿಂದೆ ನಮ್ಮ ಊರಿನಲ್ಲಿ ಸತ್ತ ಪ್ರಾಣಿಗಳನ್ನು ತಿನ್ನಲು ನೂರಾರು ಸಂಖ್ಯೆಯಲ್ಲಿ ಬರುತ್ತಿದ್ದ ರಣಹದ್ದುಗಳು ಇಂದು ನೋಡಲೂ ಸಿಗುತ್ತಿಲ್ಲ. ಈ ಲೇಖನ ಸಕಾಲಿಕ, ಸುಂದರವಾಗಿದೆ.

—ಗಣೇಶ ಭಟ್ಟ, ಕುಮಟಾ

## ವಾಸ್ತವ ತೆರೆದಿಟ್ಟ ಬರಹ

ರಣಹದ್ದು ಎಂದರೆ 'ಅಪಶಕುನದ ಹಕ್ಕಿ' ಎಂದೇ ಭಾವಿಸಿದ್ದೆ. ಹಿಂದೆಲ್ಲ ಊರಿನಲ್ಲಿ ಹದ್ದು ಹಾರಿದರೆ ಊರಿಗೆ ಏನೋ ಆಪತ್ತು ಎನ್ನುತ್ತಿದ್ದರು. ಆ ಸಮಯ ಸಣ್ಣ ಮಕ್ಕಳಿಗೆ ಹೊರಗೆ ಬರದಂತೆ ತಡೆಯುತ್ತಿದ್ದರು. ಆದರೆ ವಾಸ್ತವದಲ್ಲಿ ಈ ಲೇಖನ ಪರಿಸರವನ್ನು ಸ್ವಚ್ಛವಾಗಿಡಲು ಹದ್ದುಗಳು ಹೇಗೆ ಸಹಕರಿಸುತ್ತವೆ ಎನ್ನುವುದನ್ನು ತೆರೆದಿಟ್ಟಿದೆ. ರಾಜಸ್ಥಾನ ಸರ್ಕಾರ ವಿನಾಶದಂಚಿನಲ್ಲಿರುವ ಈ ಪಕ್ಷಿಸಂಕುಲಕ್ಕೆ ಅಭಯಾರಣ್ಯ ನಿರ್ಮಿಸಿ ಪರಿಸರ ಕಾಳಜಿ ಮೆರೆದಿದೆ. ಕ್ಷೀರಕ್ರಾಂತಿ, ಮಿತಿ ಮೀರಿದ ಔಷಧ ಬಳಕೆ ಹೇಗೆ ರಣಹದ್ದುಗಳ ಬದುಕನ್ನು ಕಸಿದುಕೊಂಡಿದೆ ಎನ್ನುವುದನ್ನು ತಿಳಿಸಿದೆ.

—ಪುರುಷೋತ್ತಮ ತಲವಾಟ, ಸಾಗರ





## ಕುತೂಹಲಕಾರಿ ಕಥೆ

'ಪ್ರಾಪ್ತಿ' (ಸೆ. 12, ವಸುಮತಿ ಉಡುಪ) ಧಾರಾವಾಹಿ ಕುತೂಹಲಕಾರಿಯಾಗಿದೆ. 'ಸುಧಾ'ದಲ್ಲಿ ಪ್ರಕಟವಾಗುವ ಹಲವು ಧಾರಾವಾಹಿಗಳನ್ನು ಓದಿದ್ದೇನೆ. ಈ ಹಿಂದೆ ವಸುಮತಿ ಉಡುಪ ಅವರದ್ದೇ 'ಅಂತಃಪುರ' ಧಾರಾವಾಹಿಯನ್ನೂ ಓದಿದ್ದೆ. ಅದರಂತೆ ಈ ಧಾರಾವಾಹಿ ಕೂಡ ಓದಲು ಇಷ್ಟವಾಗಿದೆ.

—ಸನ್ಮತಿ ಉಪಾಧ್ಯೆ, ಬೆಳಗಾವಿ

## ಕಾಯುವಂತೆ ಮಾಡಿದೆ

ಮೊದಲ ಸಂಚಿಕೆಯಲ್ಲೇ ಧಾರಾವಾಹಿ ಆಪ್ತವೆನಿಸಿತು. ನಮ್ಮ ನಡುವಿನ ಘಟನೆಯನ್ನು ಸರಳ, ನೈಜತೆಯಿಂದ ವಿವರಿಸಿರುವುದು ಮುಂದಿನ ಸಂಚಿಕೆಗೆ ಕಾಯುವಂತೆ ಮಾಡಿದೆ.

—ಭಾರತೀ ಗಂಗಾಧರ್, ಬೆಂಗಳೂರು

## ವಿನೂತನ 'ಪಾತ್ರಗಳು'

'ಪಾತ್ರಗಳು' (ಸೆ. 05, ರಾಜಕುಮಾರ ಕುಲಕರ್ಣಿ) ಕಥೆ ಎರಡು ದೃಷ್ಟಿಯಿಂದ ನನಗೆ ಆಪ್ತವೆನಿಸಿತು. ಮೊದಲನೆಯದಾಗಿ, ಒಂದು ಕಥೆಯ ಪಾತ್ರಗಳು ಇನ್ನೊಂದು ಕಥೆಯ ಹುಟ್ಟಿಗೆ ಕಾರಣವಾಗುವುದು ಸಾಹಿತ್ಯ ಕ್ಷೇತ್ರದಲ್ಲಿ ವಿನೂತನ ವಿಧಾನವೆನಿಸಿತು. ಎರಡನೆಯದು, ಕಥೆಗಾರ ತಾನು ಸೃಷ್ಟಿಸಿದ ಪಾತ್ರಗಳು ಗಾಢವಾಗಿ ಕಾಡಿದಾಗ ಮಾತ್ರ ಆತನ ಒಳಗಿನ ಸಂವೇದನಾಶೀಲತೆ ಇನ್ನಷ್ಟು ಜಾಗೃತವಾಗುತ್ತದೆ, ತಾನು ಮುಂದೆ ಸೃಷ್ಟಿಸುವ ಪಾತ್ರಗಳಿಗೆ ನ್ಯಾಯ ಒದಗಿಸಲು ಸಾಧ್ಯವಾಗುತ್ತದೆ ಎನಿಸಿತು.

—ಡಾ. ಬಿ.ಜಿ. ಕುಲಕರ್ಣಿ, ಬೆಳಗಾವಿ

## ಜೇಡಲೋಕದ ಅನಾವರಣ



'ಕಂಡಿರಾ ಕೇಸರಿ ಜೇಡವಾ...' (ಸೆ. 12, ಶಶಿಧರಸ್ವಾಮಿ ಆರ್. ಹಿರೇಮಠ) ಅದ್ಭುತ ಚಿತ್ರಗಳೊಂದಿಗೆ ಕೇಸರಿ ಜೇಡದ ವಿಸ್ಮಯ ಲೋಕವನ್ನು ಅನಾವರಣಗೊಳಿಸಿತು. ವಿವಿಧ ಪ್ರದೇಶಗಳ ಜೀವವೈವಿಧ್ಯ ಅರಿತಂತಾಯಿತು.

—ಎಸ್. ಶಿಶುಪಾಲ, ದಾವಣಗೆರೆ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in